International Journal of Applied Research 2020; 6(8): 235-239




**ISSN Print:** 2394-7500
**ISSN Online:** 2394-5869
**Impact Factor:** 5.2
IJAR 2020; 6(8): 235-239
www.allresearchjournal.com
Received: 04-03-2020
Accepted: 08-04-2020

**ಡಾ.ಆನಂದ.ಎಸ್**
ಸಹಾಯಕ ಪ್ರಾಧ್ಯಾಪಕರು
ರಾಜ್ಯಶಾಸ್ತ್ರ ವಿಭಾಗ
ಸರಸ್ವತಿ ಕಾನೂನು ಕಾಲೇಜು
ಚಿತ್ರದುರ್ಗ–577501

**Corresponding Author:**
**ಡಾ.ಆನಂದ.ಎಸ್**
ಸಹಾಯಕ ಪ್ರಾಧ್ಯಾಪಕರು
ರಾಜ್ಯಶಾಸ್ತ್ರ ವಿಭಾಗ
ಸರಸ್ವತಿ ಕಾನೂನು ಕಾಲೇಜು
ಚಿತ್ರದುರ್ಗ–577501

# ಪ್ರಜಾಕೀಯಕ್ಕೆ ರಾಜಕೀಯದ ದಿಗ್ಬಂಧನಗಳು

**ಡಾ. ಆನಂದ.ಎಸ್**

**ಸಾರಾಂಶ**
ಸರ್ವಧರ್ಮ ಸಮನ್ವಯತೆಯ ನಾಡು ಎಂದು ಕರೆಸಿಕೊಳ್ಳುವ ವಿಶ್ವದ ಏಕೈಕ ದೊಡ್ಡ ರಾಷ್ಟ್ರವೆಂದರೆ ಅದು ಭಾರತ. ಪ್ರಮುಖವಾಗಿ ಎಲ್ಲಾ ವಿಚಾರಗಳಲ್ಲಿಯೂ ವಿಭಿನ್ನತೆಯನ್ನು ಆಧರಿಸಿರುವುದನ್ನು ಗ್ರಹಿಸಬಹುದಾಗಿದ್ದು, ಇಲ್ಲಿನ ರಾಜಕೀಯ ವಿಷಯವು ಸಮಾಜದ ವಾಸ್ತವತೆಯಿಂದ ಮತ್ತು ವೈಜ್ಞಾನಿಕವಾದ ಸತ್ಯಾಸತ್ಯತೆಗಳಿಗೆ ದೂರವೆ ಉಳಿದಿದೆ ಎನ್ನಬಹುದು. ಸ್ವಾತಂತ್ರ್ಯ ಬಂದು ಏಳು ದಶಕಗಳು ಕಳೆದರೂ ಸಹ ಪಾಶ್ಚಿಮಾತ್ಯ ಜಗತ್ತಿನಂತೆ ಭಾರತವೇಕೆ ಬೆಳವಣಿಗೆ ಹೊಂದಿಲ್ಲ ಹಾಗೂ ಪಶ್ಚಿಮ ದೇಶಗಳಲ್ಲಿನ ರಾಷ್ಟ್ರ–ರಾಜ್ಯಕ್ಕೂ, ಧರ್ಮ ಮತ್ತು ರಾಜಕೀಯಕ್ಕೂ, ಟ್ಯಾಕ್ಸ್‌ನ ಪರಿಕಲ್ಪನೆಗಳಿಗೂ, ಸಂವಿಧಾನಾತ್ಮಕ ನೀತಿಗಳಿಗೂ, ಹಾಗೂ ಇಲ್ಲಿನ ರಾಜಕಾರಣಿಗಳಿಗೂ ಯಾವ ರೀತಿಯಾದ ವ್ಯತ್ಯಾಸಗಳಿವೆ ಎಂಬುದನ್ನು ಈ ಲೇಖನದ ಮೂಲಕ ವಿಮರ್ಶಿಸಲಾಗಿದೆ. ಹಾಗೆಯೇ ಹೊಸದಾಗಿ ಹುಟ್ಟಿಕೊಂಡಿರುವ ಪ್ರಜಾಕೀಯ ಪಕ್ಷದ ಸತ್ಯತೆಗಳನ್ನು ಏಕೆ ಜನರು ತಿಳಿದುಕೊಳ್ಳಲು ಹಿಂದೇಟು ಹಾಕುತ್ತಾರೆ ಎಂಬುದನ್ನು ಈ ಲೇಖನದ ಮೂಲಕ ಸವಿಸ್ತಾರವಾಗಿ ಚರ್ಚಿಸುವ ಮತ್ತು ವಿಮರ್ಶಿಸುವ ಕಾರ್ಯವನ್ನು ಮಾಡಲಾಗಿದೆ.

**ಮುಖ್ಯ ಪದಗಳು:** ರಾಷ್ಟ್ರ–ರಾಜ್ಯ (ನೇಶನ್–ಸ್ಟೇಟ್ಸ್), ಧರ್ಮ ಮತ್ತು ರಾಜಕೀಯ, ತೆರಿಗೆ (ಟ್ಯಾಕ್ಸ್), ಸಂವಿಧಾನಾತ್ಮಕ ನೀತಿಗಳು, ಭಾರತದ ರಾಜಕೀಯ.

**ಪೀಠಿಕೆ**
ವಿಶ್ವದಲ್ಲಿರುವ ಯಾವುದೇ ರಾಷ್ಟ್ರವಾಗಲಿ ನಿಂತ ನೀರಾಗುವುದಕ್ಕೆ ಸಾಧ್ಯವಿಲ್ಲ. ಏಕೆಂದರೆ ಸಮಾಜವು ಚಲನಯುಕ್ತವಾಗಿರುವುದರಿಂದ ಪೀಳಿಗೆಯಿಂದ ಪೀಳಿಗೆಗೆ ತನ್ನ ಬೇಕು ಬೇಡಗಳ ಮೂಲಕ ಬದಲಾವಣೆ ಹೊಂದತ್ತದೆ. ಆದರೆ ಯಾವುದೇ ಸಮಾಜವು ಕ್ಷಿಪ್ರವಾಗಿ ದಿಢೀರನೆ ಬದಲಾವಣೆ ಕಾಣಲು ಸಾಧ್ಯವಾಗುವುದೇ ಇಲ್ಲಾ ಫ್ರಾನ್ಸಿನ ಮಹಾಕ್ರಾಂತಿಯಿಂದ ಕ್ಷಿಪ್ರ ಬದಲಾವಣೆಯಾಯಿತು ಎನ್ನಬಹುದು, ಆದಾಗ್ಯೂ ಅದು ಅಭಿವೃದ್ಧಿಯ ಪಥದಲ್ಲಿ ಸಾಗಲು ನಾಲ್ಕು ಸಂವಿಧಾನಗಳನ್ನು ಬದಲಾಯಿಸಿ ಐದನೆಯ ಸಂವಿಧಾನವನ್ನು ರಚನೆ ಮಾಡಿಕೊಂಡಿದೆ. ಅದೇನೆ ಇರಲಿ ಜಗತ್ತಿನಲ್ಲಿಯೇ ಏಳನೇ ದೊಡ್ಡ ರಾಷ್ಟ್ರವಾಗಿರುವ ಭಾರತ ಇನ್ನು ಅಭಿವೃದ್ಧಿಶೀಲ ರಾಷ್ಟ್ರವೆಂದೇ ಮಕ್ಕಳು ಓದುತ್ತಿರುವುದು ವಾಸ್ತವ, ಹಾಗೆಯೇ ಯುರೋಪಿನ ರಾಷ್ಟ್ರಗಳ ದೃಷ್ಟಿಕೋನದಲ್ಲಿ ಭಾರತ ಅಭಿವೃದ್ಧಿ ಹೊಂದಿದ ರಾಷ್ಟ್ರವಾಗಿದ್ದು ಭಾರತಕ್ಕೆ ಕೊಡುತ್ತಿದ್ದ ಸಬ್ಸಿಡಿ ಮತ್ತಿತರ ಹಣಕ್ಕೆ ಕತ್ತರಿಯಾಕಿರುವುದು ಅಷ್ಟೆ ಸತ್ಯವಾದುದು. ಭಾರತವು ಯುರೋಪಿನ ರಾಷ್ಟ್ರಗಳ ದೃಷ್ಟಿಕೋನದಲ್ಲಿ ಅಭಿವೃದ್ಧಿ ಹೊಂದಿದ ದೇಶವಾಗಿದ್ದರೂ ಇಲ್ಲಿ ವಿದೇಶಿಯರಂತೆ ದೊಡ್ಡ ದೊಡ್ಡ ಮನೆಗಳಾಗಲಿ ಸ್ವಚ್ಛತೆಯಾಗಲಿ ಬದುಕುವ ಜೀವನ ಶೈಲಿಯಲ್ಲಾಗಲಿ ಯಾವುದೇ ಬದಲಾವಣೆಯನ್ನು ಕಾಣಲು ಸಾಧ್ಯವಾಗಿಲ್ಲ. ಈಗ ನೇರವಾಗಿ ವಿಷಯಕ್ಕೆ ಬರೋಣ ಇವೆಲ್ಲದರ ನಡುವೆ ಕರ್ನಾಟಕದ ಇತಿಹಾಸದಲ್ಲಿ ಹೊಸ ಕ್ರಾಂತಿ ಮತ್ತು ಹೊಸ ದಿಕ್ಕನ್ನು ಸೂಚಿಸುವಂತೆ ಉಪೇಂದ್ರ ಕುಮಾರ್‌ರವರು ಉತ್ತಮ ಪ್ರಜಾಕೀಯ ಪಕ್ಷ (ಯು.ಪಿ.ಪಿ)ಯ ಸ್ಥಾಪನೆಯ ಮೂಲಕ ಪಾರದರ್ಶಕ ಆಡಳಿತ ನಡೆಸಲು ವೇದಿಕೆಯನ್ನು ಸೃಷ್ಟಿಸಿದ್ದಾರೆ ಆದರೆ ಇದಕ್ಕೆ ಗತಕಾಲದ ಇತಿಹಾಸ ಹೊಂದಿರುವ ರಾಜಕೀಯದಿಂದ ಭಾರತೀಯ ವ್ಯವಸ್ಥೆಯೊಳಗೆ ಹಲವು ದಿಗ್ಬಂಧನಗಳನ್ನು ಎದುರಿಸಬೇಕಾಗುತ್ತದೆ. ಅವುಗಳ ಸ್ವರೂಪ ಹೇಗಿದೆ ಎಂದರೆ ಏಳು ಸುತ್ತಿನ ಕೋಟೆಯನ್ನು ಭೇದಿಸಿಕೊಂಡು ಪ್ರಜಾಕೀಯ ಹೊರಬಂದಾಗ ಮಾತ್ರ ಪ್ರಜೆಗಳಿಗೆ

ಅರ್ಥವಾಗುತ್ತದೆ.ಅವೆಲ್ಲವನ್ನು ಇಟ್ಟುಕೊಂಡು ಈ ಲೇಖನದ ಮೂಲಕ ಚರ್ಚಿಸೋಣ.

- ಭಾರತದಲ್ಲಿ ರಾಷ್ಟ್ರ–ರಾಜ್ಯ (ನೇಷನ್ಸ್–ಸ್ಟೇಟ್) ಪರಿಕಲ್ಪನೆಯಿಲ್ಲದಿರುವುದು.
- ಧರ್ಮ ಮತ್ತು ರಾಜಕೀಯ ಸಮ್ಮಿಶ್ರಣಗೊಂಡಿರುವ ವ್ಯವಸ್ಥೆ.
- ತೆರಿಗೆ ಹಣ ಬಹಿರಂಗವಾದಾಗ ಬರುವ ಸಮಸ್ಯೆ.
- ರಾಜಕಾರಣಿಗಳ ಟೀಕೆಯ ಸ್ವರೂಪ ಮತ್ತು ಜನರನ್ನು ಮರುಳು ಮಾಡುವ ವಿದ್ಯೆ.
- ಭಾರತದಲ್ಲಿನ ಸಂವಿಧಾನಾತ್ಮಕ ನೀತಿಗಳು.
- ಬಹುತೇಕ ಜನಕ್ಕೆ ಕ್ಷಿಪ್ರ ಅಭಿವೃದ್ಧಿ ಇಷ್ಟವಿಲ್ಲದಿರುವುದು.
- ಅಭಿವೃದ್ಧಿಯ ದೃಷ್ಟಿಕೋನ ಸಮುದಾಯವೇ ಅಥವಾ ವ್ಯಕ್ತಿಗತವಾಗಿದೆಯೇ ಎಂಬುದನ್ನು ತಿಳಿಯದಿರುವುದು.

**1) ಭಾರತದಲ್ಲಿ ರಾಷ್ಟ್ರ ರಾಜ್ಯ ಪರಿಕಲ್ಪನೆಯಿಲ್ಲದಿರುವುದು**

ಪ್ರಜಾಕೀಯಕ್ಕೆ ಮೊದಲನೆಯ ಸಮಸ್ಯೆ ಅಥವಾ ದಿಗ್ಬಂಧನವೆಂದರೆ ಅದು ರಾಷ್ಟ್ರ ರಾಜ್ಯ ಪರಿಕಲ್ಪನೆ ಅಂದರೆ ರಾಷ್ಟ್ರವೆಂದರೆ ನೇಷನ್ನ ಎಂಬ ಅರ್ಥದಲ್ಲಿ ಇದು ಒಂದೇ ಜನಾಂಗವನ್ನು ಪ್ರತಿನಿಧಿಸುವಂತದ್ದು ಉದಾಹರಣೆಗೆ ಅಮೇರಿಕಾ ಮತ್ತು ಪಾಶ್ಚಿಮಾತ್ಯ ಜಗತ್ತಿನ ಎಲ್ಲಾ ರಾಜ್ಯಗಳು ಬಹುಸಂಖ್ಯಾತವಾಗಿ ಕ್ರಿಶ್ಚಿಯನ್ನಿಟಿಯ ರಾಜ್ಯಗಳಾಗಿವೆ ಆದ್ದರಿಂದಲೆ ಅಭಿವೃದ್ಧಿ ಹೊಂದಲು ಸಹಕಾರಿಯಾಗಿದೆ. ಹಾಗೆಯೆ ಬಹುತೇಕ ಮಧ್ಯಪ್ರಾಚ್ಯ ರಾಷ್ಟ್ರಗಳಾದ ದುಬೈ ಖತರ್ ಹಾಗೂ ಇನ್ನಿತರ ರಾಜ್ಯಗಳು ಇಸ್ಲಾಮಿಕ್‌ನ ಷರಿಯಾ ಮತ್ತು ಖುರನ್ ಕಾನೂನುಗಳಿಂದ ಬಿಗಿಯಾಗಿ ಅಭಿವೃದ್ಧಿಗೆ ಪೂರಕವಾಗಿ ಹಾಗೆಯೇ ಏಷ್ಯಾದ ಜಪಾನ್ ಹಾಗೂ ಚೀನಾ ರಾಷ್ಟ್ರಗಳು ಸಹ ಪ್ರಪಂಚದಲ್ಲಿ ಅಗ್ರಗಣ್ಯ ಸ್ಥಾನದಲ್ಲಿವೆ. ಇದಕ್ಕೆ ಬಹುಮುಖ್ಯವಾಗಿ ಧರ್ಮದ ಹಿನ್ನಲೆ ಪ್ರಮುಖವಾಗಿದೆ. ಆದರೆ ಭಾರತದಲ್ಲಿ ಯಾವುದೇ ಧರ್ಮ ಅಧಿಕೃತವಾಗಿಲ್ಲ ಹಾಗೆಯೆ ಭಿನ್ನ ಭಿನ್ನ ಧರ್ಮಗಳಿವೆ ಹಾಗೂ ಧರ್ಮದ ಒಳಗೂ ಭಿನ್ನತೆ ಹಾಗೂ ತಾರತಮ್ಯತೆ ಇರುವುದರಿಂದ ನಮ್ಮ ಜನಾಂಗ ಒಬ್ಬ ಎಂ ಎಲ್ ಎ ಆಗಲಿ ಅಥವಾ ಎಂ.ಪಿ ಆಗಲಿ ಅವನು ಎಷ್ಟೆ ಭ್ರಷ್ಟಾಚಾರ ಮಾಡಿದರೂ ನಮ್ಮವನ್ನು ಒಬ್ಬ ತಿಂದರೆ ತಿನ್ನಲಿ ಎಂಬ ಸ್ವಾರ್ಥ ಮನೋಭಾವನೆಗಳಿರುವುದರಿಂದ ಇಲ್ಲಿ ರಾಜ್ಯದ ಅಭಿವೃದ್ಧಿ ಸಾಧ್ಯವಾಗುವುದೇ ಇಲ್ಲಾ ಎನ್ನಬಹುದು. ಹಾಗಾದರೆ ಪಾಕಿಸ್ತಾನ ಅಪಘಾನಿಸ್ತಾನ ಖಜಕಿಸ್ತಾನ ಏಕೆ ಅಭಿವೃದ್ಧಿಯಾಗಿಲ್ಲ ಎಂಬ ಪ್ರಶ್ನೆ ಮೂಡಬಹುದು ಅಲ್ಲಿ ಕಾನೂನುಗಳು ಅಂದರೆ ಸಾಮಾನ್ಯ ಕಾನೂನು ಗಟ್ಟಿಯಾಗಿವೆ ಆದರೆ ಸಂವಿಧಾನಾತ್ಮಕ ಕಾನೂನುಗಳು ಜಾರಿಗೊಳಿಸಲು ಗಟ್ಟಿ ನಾಯಕತ್ವವಿಲ್ಲ. ಭಾರತದಲ್ಲಿ ಸಂವಿಧಾನಾತ್ಮಕ ಕಾನೂನು ಗಟ್ಟಿಯಾಗಿವೆ ಉತ್ತಮ ನಾಯಕರು ಇದ್ದಾರೆ ಆದರೆ ಸಾಮಾನ್ಯ ಕಾನೂನುಗಳು ಬಿಗಿಯಾಗಿಲ್ಲ ಮತ್ತು ನಮ್ಮ ಅನುಭವಕ್ಕೆ ನಿಲುಕದ ಕಾನೂನುಗಳಾಗಿರುವುದರಿಂದ ಭ್ರಷ್ಟಾಚಾರ ಮಾಡಿ ಜೈಲಿಗೆ ಹೋಗಿ ಬಂದರೆ ಹೂವಿನ ಹಾರ ಮತ್ತು ಚಪ್ಪಾಳೆ ಸಿಗುತ್ತವೆ. ನೈತಿಕವಾಗಿ ಛೀಮಾರಿ ಹಾಕುವ ಸಮಾಜ ಭಾರತದಲ್ಲಿ ಕಾಣೆಯಾಗಿದೆ. ಆದರೆ ಪಾಶ್ಚಿಮಾತ್ಯ ದೇಶಗಳಲ್ಲಿ ಈ ರೀತಿಯಾಗಿ ಊಹಿಸಲು ಸಹ ಸಾಧ್ಯವಿಲ್ಲವಾಗಿದೆ. ಹಾಗಾಗೀ ಒಂದು ಧರ್ಮ ಮತ್ತು ಧರ್ಮದ ಒಳಗೆ ಸಮುದಾಯ ಪ್ರಜ್ಞೆಯನ್ನು ಬೆಳೆಸಿದರೆ ಮಾತ್ರ ಪ್ರಜಾಕೀಯ ಯಶಸ್ಸಿಗೆ ಮೊದಲ ದಾರಿ ತೆರೆಯುತ್ತದೆ ಆದರೆ ಇದು ಭಾರತದಲ್ಲಿ ಅಸಾಧ್ಯವಾದ್ದರಿಂದ ಪ್ರತಿಯೊಬ್ಬ ಸಾಮಾನ್ಯ ಪ್ರಜೆಯು ಅಭಿವೃದ್ಧಿಯೊಂದೆ ಮಾನದಂಡವಾಗಿಸಿ ತನ್ನ ಮುಂದಿನ ಪೀಳಿಗೆಯನ್ನು ನೆನೆದು ಸಹಕರಿಸಬೇಕಾಗಿದೆ.

**2) ಧರ್ಮ ಮತ್ತು ರಾಜಕೀಯ ಸಮ್ಮಿಶ್ರಣಗೊಂಡಿರುವ ವ್ಯವಸ್ಥೆ**

ಯುರೋಪಿನ ಜಗತ್ತಿನಲ್ಲಿ 16ನೆ ಶತಮಾನದವರೆಗೂ ಒಂದು ವ್ಯಾಜ್ಯ ನಡೆಯುತ್ತದೆ ಅದೇ ಧರ್ಮ ಶ್ರೇಷ್ಠವೇ ಅಥವಾ ರಾಜ್ಯ ಶ್ರೇಷ್ಠವೇ ಎಂದು ಇದಕ್ಕೆ ಪ್ರತಿಯೊಂದು ಕಡೆಗೂ ಸಾವಿರಾರು ಸಾಕ್ಷಿಗಳನ್ನು ಮುಂದಿಡುತ್ತಾರೆ. ಕೊನೆಗೆ ರಿಲಿಜಿಯನ್ ವಿಷಯದಲ್ಲಿ ರಾಜ್ಯ (ರಾಜಕೀಯ) ಎಂದಿಗೂ ಹಸ್ತಕ್ಷೇಪ ಮಾಡಬಾರದು ಹಾಗೂ ರಾಜ್ಯದ ವಿಷಯದಲ್ಲಿ ರಿಲಿಜಿಯನ್ನಿನ ಪಾದ್ರಿ ಅಥವಾ ಪೋಪ್‌ರವರು ಹಸ್ತಕ್ಷೇಪ ಮಾಡಬಾರದೆಂದು ಒಪ್ಪಂದವಾಗುತ್ತದೆ. ಆದ್ದರಿಂದ ಅಲ್ಲಿ ಬರಾಕ್‌ಒಬಾಮಾ, ಡೊನಾಲ್ಡ್ ಟ್ರಾಂಪ್, ಥೆರೆಸಾ ಮೇ, ರಂತಹ ದಿಗ್ಗಜ ನಾಯಕರು ಸಹ ರಿಲಿಜಿಯನ್ ವಿಚಾರವಾಗಿ ಒಂದು ಹೇಳಿಕೆಯನ್ನು ಸಹ ನೀಡುವುದಿಲ್ಲ ಹಾಗೆಯೇ ಇಡೀ ವಿಶ್ವವನ್ನೇ ತನ್ನತ್ತ ಸೆಳೆಯುವ ಶಕ್ತಿಯಿರುವ ಕ್ರೈಸ್ತಪಾದ್ರಿಗಳು ರಾಜಕೀಯದ ಬಗ್ಗೆ ಒಂದು ಹೇಳಿಕೆಯನ್ನು ಸಹ ಕೊಡುವುದಿಲ್ಲ. ಏಕೆಂದರೆ ಮನುಷ್ಯನ ನೆಮ್ಮದಿಗೆ ಚರ್ಚ್ ಮತ್ತು ರಾಜ್ಯದ ಪಾತ್ರ ಎರಡು ಅತಿಮುಖ್ಯ ಹಾಗಾಗಿ. ಆದರೆ ಭಾರತದಲ್ಲಿ ಇವೆರಡರ ಸಮ್ಮಿಶ್ರಣದಿಂದಾಗಿ ಭಾರತದ ಪಕ್ಷಗಳು ಧರ್ಮಾಧಾರಿತವಾಗಿದ್ದು ಕಾರ್ಲ್‌ಮಾರ್ಕ್ಸ ಹೇಳುವಂತೆ ಧರ್ಮ ಅಫೀಮಿನ ತರ ಜನಗಳನ್ನು ಸೆಳೆಯುವಂತ ಕೆಲಸ ಮಾಡುತ್ತವೆ. ನ್ಯಾಯಾಲಯದ ಮೆಟ್ಟಿಲೇರಿರುವ ಎಷ್ಟೊ ವಿಚಾರಗಳನ್ನ ರಾಜಕೀಯ ವ್ಯಕ್ತಿಗಳು ರಾಜಕೀಕರಣಗೊಳಿಸಿ ಸಮಾಜ ಬೇರೆ ದಿಕ್ಕಿನಡೆಗೆ ಸಾಗುವಂತೆ ಮಾಡಿವೆ. ಮುಜುರಾಯಿ ಇಲಾಖೆಯಿಂದ ಬೇರ್ಪಡಿಸಿ ದೇವಾಲಯಗಳನ್ನು ಸ್ವತಂತ್ರಗೊಳಿಸಿದರೆ ನಡೆದುಕೊಳ್ಳುವ ಭಕ್ತರು ಬೇಕಾದು ಮಾಡುವಂತಹ ಶಕ್ತಿ ಭಾರತದ ಸಂಸ್ಕೃತಿಯಲ್ಲಿಯೇ ಇದೆ ಎಂಬುದನ್ನು ಮರೆಯಬಾರದು. ಭಾರತದಲ್ಲಿ ಧರ್ಮ ಮತ್ತು ರಾಜಕೀಯ ಸಮ್ಮಿಶ್ರಣಗೊಂಡಿರುವುದರಿಂದ ಜಾತಿಗೊಬ್ಬ ಮಠಾಧೀಶರು ಮತಗಳನ್ನು ಸೆಳೆಯಲು ಪಕ್ಷಗಳಿಂದ ಮತ್ತು ಅಧಿಕಾರವಿರುವ ಸರ್ಕಾರದಿಂದ ಆಮಿಷಗಳನ್ನು ಒಡ್ಡುವಂತದ್ದು ಸಹಜವಾಗಿದೆ.ಇದರಿಂದ ಜಾತಿವಾರು ಅಭಿವೃದ್ಧಿಗೆ ಜನ ಅವಣಿಸುತ್ತಾರೆ ಹೊರೆತು ಹೈಟೆಕ್ ಹಾಸ್ಪಿಟಲ್ ಕಟ್ಟಿ ಎಂದು ಪ್ರತಿಭಟನೆ ಮಾಡಲು ಒಬ್ಬನು ಬರುವುದಿಲ್ಲ. ಹಾಗೆಯೇ ಎಲ್ಲಾ ಖಾಸಗಿ ಆಸ್ಪತ್ರೆ, ಶಾಲಾ, ಕಾಲೇಜುಗಳನ್ನು ಇವರೆ ಮಾಡಿ ಕೊಂಡಿರುವುದರಿಂದ ಜನಗಳ ಮೂಗಿಗೆ ತುಪ್ಪ ಸವರಿ 500 ಅಥವಾ 2000ರ ನೋಟುಗಳಿಂದ ಮತ ಪಡೆಯೊಕೆ ಮುಂದಾಗುತ್ತಾರೆ. ಹಾಗೆಯೇ ಯಾವುದೇ ಶ್ರೀಸಾಮಾನ್ಯ ಧ್ವನಿಯೆತ್ತಿದರೆ ಭಾರತದಲ್ಲಿ ಸಹಾಯಕರಾಗಿ ನಿಲ್ಲುವುದಿಲ್ಲ ಬದಲಾಗಿ ನಗಾಡುವುದನ್ನು ಗಮನಿಸಬಹುದಾಗಿದೆ. ಆದ್ದರಿಂದ ಪ್ರಜಾಕೀಯದ ಆಶಯಗಳು ಯಶಸ್ವಿಯಾಗಬೇಕಾದರೆ ಧರ್ಮ ಮತ್ತು ರಾಜಕೀಯ ವಿಷಯಗಳು ಪರಸ್ಪರ ಹಸ್ತಕ್ಷೇಪವನ್ನು ತಡೆಯಬೇಕು. ಇಲ್ಲಾವಾದಲ್ಲಿ ಅಭಿವೃದ್ಧಿ ಮಾಡುತ್ತೇವೆ ಎಂದು ಸತ್ಯ ಎದುರಿಗೆ ಇಟ್ಟರೆ ನಮಗೇನು ಲಾಭವಿಲ್ಲ ಎಂದು ಹೋಗುವವರೆ ಹೆಚ್ಚು ಧರ್ಮದ ಬಗೆ ಮಾತನಾಡಿದ ರಾಜಕಾರಣಿಗೆ ದಂಡ ಮತ್ತು ಜೈಲು ಹಾಗೆಯೇ ರಾಜಕಾರಣದ ಬಗ್ಗೆ ಮಾತನಾಡಿದ ಮಠಾಧೀಶರು ಮೌಲ್ವಿಗಳು ಪಾದ್ರಿಗಳಿಗೂ ಜೈಲು ಮತ್ತು ದಂಡವನ್ನು ವಿಧಿಸಿದರೆ ವ್ಯವಸ್ಥೆ ಅಭಿವೃದ್ಧಿ ಕಡೆ ಮುಖ ಮಾಡುತ್ತದೆ ಇಲ್ಲ ಎಂದರೆ ಅದೇ ಜಾತಿ, ಧರ್ಮ, ದೇವರು ದೇವಸ್ಥಾನ ಮಸೀದಿಚರ್ಚು ಎಂದೇ ಮುಂದೂಡಬೇಕು

ಹಾಗೆಯೇ ಈ ವ್ಯವಸ್ಥೆ 500 ವರ್ಷಗಳು ಕಳೆದರೂ ಬದಲಾಗುವುದಿಲ್ಲ ಏಕೆಂದರೆ "ಚಿಂತನೆ ಮಾಡುವ ನರಗಳೆ ಸತ್ತಾಗ ಹೊಸ ಆಲೋಚನೆಗಳಿಗೆ ಆಸ್ಪದವಿಲ್ಲವೆಂಬುದು ಜನಜನಿತ ಸತ್ಯ".

**3) ತೆರಿಗೆ ಹಣ ಬಹಿರಂಗವಾದಾಗ ಬರುವ ಸಮಸ್ಯೆ**

ಆಡಳಿತದಲ್ಲಿ ಪಾರದರ್ಶಕತೆ ಇರಬೇಕು ಎಂಬುದು ಪ್ರಜಾಕೀಯ ಪಕ್ಷದ ಸಂಸ್ಥಾಪಕರಾದ ಉಪೇಂದ್ರ ಕುಮಾರ್‌ರವರ ಕನಸು ಆದರೆ ಅದು ಅಸಾಧ್ಯವೆನ್ನಬಹುದು ಕಾರಣವೇನೆಂದರೆ ಭಾರತ ಅಥವಾ ಕರ್ನಾಟಕದಲ್ಲಿ ಕೋಟ್ಯಾಂತರ ಜನರು ಇರುವುದರಿಂದ ತೆರಿಗೆ ಹಣವನ್ನು ಯಾವುದೇ ಒಂದು ಕಾರ್ಯಕ್ಕೆ ವಿನಿಯೋಗ ಮಾಡಿದರೆ ಅವರಿಗ್ಯಾಕೆ ಕೊಟ್ಟೆ ಆ ಜಾತಿಗೆಷ್ಟು ಈ ಜನರಿಗೆಷ್ಟು ನಮಗೂ ಅಂತದ್ದೆ ಬೇಕು ಹಾಗೆಯೇ ಜಿಲ್ಲೆಗಳಿಗೆ ಅನುದಾನ ಹಂಚಿಕೆ ವಿಷಯದಲ್ಲಿ ಬಹಿರಂಗವಾದರೆ ತಾರತಮ್ಯ ಮಾಡುತ್ತಾರೆಂದು ಪ್ರತಿಭಟನೆಗಳನ್ನು ಎದುರಿಸಬೇಕಾಗುತ್ತದೆ ಉದಾಹರಣೆಗೆ ಸಮಾಜ್ಯ ಕಲ್ಯಾಣ ಇಲಾಖೆಯಲ್ಲಿ ಒಂದು ವರ್ಷಕ್ಕೆ ಕರ್ನಾಟಕದಲ್ಲಿ 28 ಸಾವಿರ ಕೋಟಿ ಬಿಡುಗಡೆಯಾಗುತ್ತದೆ ಅದು ವಿದ್ಯಾರ್ಥಿ ವೇತನ, ವಿದ್ಯಾರ್ಥಿನಿಲಯದ ನಿರ್ವಹಣೆ ಹಾಗೆಯೇ ವಿದ್ಯಾರ್ಥಿಗಳಿಗೆ ಸಾಮಾಗ್ರಿಗಳನ್ನು ಒದಗಿಸುವುದು ಹೀಗೆ ನೂರಾರು ಕ್ರಮವಿದೆ ಇದನ್ನು ಮೇಲ್ವರ್ಗದ ವಿದ್ಯಾರ್ಥಿಗಳು ಕೇಳಿದಾಗ ಕೊಡಲೇಬೇಕು ಏಕೆಂದರೆ ನಾವು ತೆರಿಗೆದಾರರೆ ಕೊಡಿ ಎಂದು ಅದಕ್ಕೆ ಪ್ರತಿಯಾಗಿ ನಾವು ಸಂವಿಧಾನದಲ್ಲಿ ಹೇಳಿದೆ ಎಸ್.ಸಿ ಎಸ್.ಟಿ ಗೆ ಕೊಡಬೇಕೆಂದು ಎಂದರೆ ಜನರ ಕೆಂಗಣ್ಣಿಗೆ ಗುರಿಯಾಗಬೇಕಾಗುತ್ತದೆ.ಇದನ್ನು ಸಮರ್ಥವಾಗಿ ರಾಜಕಾರಣಿಗಳು ದಾಳವಾಗಿ ಬಳಸಿಕೊಳ್ಳುತ್ತವೆ. ಹಣ ಕಂಡರೆ ಹೆಣವು ಬಾಯಿ ತೆರೆಯುವಂತೆ ಜನ ಇಂಜಿನಿಯರ್ ಹೇಳಿದ ವಿಚಾರಕ್ಕೆ ಆಗಲಿ ಅಥವಾ ನಾಲ್ಕು ಜನ ಹೇಳಿದ ತೀರ್ಮಾನದಂತಾಗಲಿ ಇಲ್ಲಿ ಸಾಧ್ಯವಿಲ್ಲ ಏಕೆಂದರೆ ಇಲ್ಲಿ ಒಂದೆ ರೀತಿಯ ಆಲೋಚನೆಗಳು ಇಲ್ಲದಿರುವುದು ಇಲ್ಲಿ ದೇಶಕ್ಕಿಂತ ವೈಯಕ್ತಿಕ ಪ್ರತಿಷ್ಠೆಗಳೆ ಹೆಚ್ಚಾಗುತ್ತವೆ. ತೆರಿಗೆ ಹಣ ಬಹಿರಂಗವಾದರೆ ಹಣವನ್ನು ಖರ್ಚು ಮಾಡುವುದಕ್ಕೆ ಸಾವಿರ ಸಲ ಯೋಚನೆ ಮಾಡಬೇಕು ಸ್ವಲ್ಪ ಎಡವಿದರು ಜನಗಳು ನಮಗೆ 500,1000 ಕೊಡೊ ಬೇರೆ ಪಕ್ಷವೆ ಅತ್ಯುತ್ತಮ ಎಂದು ತೀರ್ಮಾನಿಸುತ್ತಾರೆ ಅಭಿವೃದ್ಧಿ ಎಂದರೆ ಬರೀ ಹೈಟೆಕ್ ಶಾಲೆ, ಕಾಲೇಜು ಆಸ್ಪತ್ರೆಗಳಷ್ಟೆ ಅಲ್ಲ ಅದರ ಆಚೆಗೆ ಕೊಳಚೆ ಪ್ರದೇಶ, ಭಿಕ್ಷುಕರು, ನಿರ್ಗತಿಕರು ಇನ್ನು ಸಾವಿರಾರು ತರಹದ ಜನರನ್ನು ಮುಖ್ಯವಾಹಿನಿಗೆ ತರಬೇಕಾಗುತ್ತದೆ. ಆಗ ಸಮಗ್ರ ಅಭಿವೃದ್ಧಿಗೆ ಪೂರಕವಾಗಿರುತ್ತದೆ ಇಲ್ಲವಾದರೆ ಮತ್ತೆ ಕೆಲವೇ ಕೆಲವು ವರ್ಗ ಇವುಗಳನ್ನು ಬಳಸಿಕೊಂಡು ಮುಂದಾಗುತ್ತದೆ ಇನ್ನುಳಿದ ವರ್ಗಗಳು ಕೂಲಿವೃತ್ತಿ, ಹಾಗೆಯೇ ಬೇರೆ ಬೇರೆ ಸಾಮಾನುಗಳನ್ನು ಮಾರಿಕೊಂಡು ಅಲೆಮಾರಿ ತರ ಬದುಕುತ್ತಾರೆ ಇದರಿಂದ ವಿದೇಶಗಳ ತರಹ ನಮ್ಮ ದೇಶ ಮಿನುಗಬೇಕು ಎಂಬುದು ಬರೀ ಕನಸಾಗುತ್ತದೆ.

**4) ರಾಜಕಾರಣಿಗಳ ಟೀಕೆಯ ಸ್ವರೂಪ ಮತ್ತು ಜನರನ್ನು ಮರುಳು ಮಾಡುವ ವಿದ್ಯೆ**

ವಿಶ್ವಸಂಸ್ಥೆ ಪ್ರಕಾರ ಇಡೀ ಪ್ರಪಂಚದಲ್ಲಿಯೇ ಅತ್ಯಂತ ಮೂರ್ಖ ಮತದಾರರು ಭಾರತದಲ್ಲಿರುವಂತೆ, ಇಡೀ ವಿಶ್ವದಲ್ಲಿಯೇ ಅತ್ಯಂತ ನಾಟಕೀಯ, ಮೋಸ, ವಂಚನೆ, ಭ್ರಷ್ಟತೆಯ ರಾಜಕಾರಣಿಗಳಿರುವುದು ಭಾರತದಲ್ಲಿಯೇ ಎಂದರೆ ತಪ್ಪಾಗಲಾರದು. ಏಕೆಂದರೆ ಜನರನ್ನು ಮಂಗನ ರೀತಿ ಕುಣಿಸುವ ಕಲೆ ನಮ್ಮ ರಾಜಕಾರಣಿಗಳಿಗೆ ತಿಳಿದಿದೆ. ನಮ್ಮ ಜನ ಬುದ್ಧಿವಂತರಾಗಲು ಸಾಕಷ್ಟು ಸಮಯಬೇಕು ಏಕೆಂದರೆ ಅವರನ್ನು ಬುದ್ಧಿವಂತರಾಗಲು ರಾಜಕಾರಣಿಗಳು ಬಿಡುವುದೇ ಇಲ್ಲಾ ಬಡವರು ನಿರ್ಗತಿಕರು ಇದ್ದರೆ ಮಾತ್ರ ಒಬ್ಬ ನಾಯಕ ದೀನ ದಲಿತರ ಉದ್ಧಾರಕ, ಬಡವರ ಬಂಧು, ಭರವಸೆಯ ಆಶಾಕಿರಣ ಎಂಬ ಸ್ಲೋಗನ್‌ಗಳನ್ನು ಉಚ್ಚರಿಸಲು ಸಾಧ್ಯ ಹಾಗಾಗಿ ಜನರನ್ನು ಒಂದು ಪಕ್ಷ ಧರ್ಮಾಧಾರಿತವಾಗಿ ಸೆಳೆದರೆ ಇನ್ನೊಂದು ಪಕ್ಷ ಅದರ ವಿರುದ್ಧ ಸೆಕ್ಯುಲರ್ ನೀತಿಯಿಂದ ಸೆಳೆಯುತ್ತದೆ. ಇಬ್ಬರೂ ಕಳ್ಳರೆ ಆಗಿರುವುದರಿಂದ ಮೂರನೇ ಆಯ್ಕೆ ಇಲ್ಲಾದಂತಾಗುತ್ತದೆ. ಆದ್ದರಿಂದ ಪ್ರತಿಯೊಬ್ಬ ಭಾರತೀಯನ ಚಿಂತನೆ ಒಂದು ಎಡಪಂಥಿಯವಾಗಿರುತ್ತದೆ. ಇಲ್ಲಾ ಬಲಪಂಥಿಯ ಆಗಿರುತ್ತದೆ. ಇಲ್ಲಿ ಯಾವುದಾದರು ಒಂದು ಕಡೆ ಇದ್ದರೆ ಮಾತ್ರ ದುಡ್ಡು ಮಾಡಬಹುದು ಮತ್ತು ಬೆಂಬಲವು ಸಹ ಸಿಗುತ್ತದೆ.ಇಲ್ಲದಿದ್ದರೆ ಎಡಬಿಡಂಗಿಎಂಬ ಪಟ್ಟವನ್ನು ಕಟ್ಟಿ ದೂರವಿಡುತ್ತಾರೆ. ಇದೊಂದು ರೀತಿಯ ಶೋಚನೆಯ ಸ್ಥಿತಿ ಎರಡರಲ್ಲಿ ಒಂದು ಪಕ್ಷ ಅಧಿಕಾರಕ್ಕೆ ಬಂದಾಗ ನಮಗೆ ಅಭಿವೃದ್ಧಿ ಮಾಡಿ ಎಂದು ಬೊಬ್ಬೆ ಹೊಡೆಯುವುದು ಹಾಸ್ಯಾಸ್ಪದವಾಗಿದೆ. ಇವೆರಡರ ನಡುವೆ ಮಧ್ಯಪಂಥ, ಅಭಿವೃದ್ಧಿಯ ಪಂಥವಾಗಿ ಪ್ರಜಾಕೀಯವು ಜನರಲ್ಲಿ ನಂಬಿಕೆಯನ್ನು ಹುಟ್ಟಿಸಿದರೆ ಮಾತ್ರ ಯಶಸ್ವಿಯಾಗಲು ಸಾಧ್ಯವಾಗುತ್ತದೆ.

**5) ಭಾರತದಲ್ಲಿನ ಸಂವಿಧಾನಾತ್ಮಕ ನೀತಿಗಳು**

ಭಾರತೀಯ ಸಂವಿಧಾನವನ್ನು ಎರಡು ರೀತಿಯಾಗಿ ನೋಡಬಹುದು ಒಂದು ಅಂಬೇಡ್ಕರ್ ಬರೆದ ಸಂವಿಧಾನ ಭಾರತದ ಅನುಭವಗಳಿಗೆ ತಕ್ಕಂತೆಯಿಲ್ಲವೆಂದು. ಎರಡನೆಯದಾಗಿ ಇಡೀ ಪ್ರಪಂಚದಲ್ಲಿಯೇ ಸಮಗ್ರವಾಗಿ ಅಭಿವೃದ್ಧಿಯಾಗಲು ಇದಕ್ಕಿಂತ ಎರಡನೆ ಆಯ್ಕೆಯಿಲ್ಲವೆಂದು. ಮೊದಲನೆಯ ಅಂಶವನ್ನು ನೋಡುವುದಾದರೆ ಭಾರತ ಸಂವಿಧಾನವು ಪಾಶ್ಚಿಮಾತ್ಯ ಜಗತ್ತಿನಿಂದ ಎರವಲು ಪಡೆದಿರುವುದರಿಂದ ನಮ್ಮ ರಾಷ್ಟ್ರ ಸಮಗ್ರವಾಗಿ ಅಭಿವೃದ್ಧಿಯಾಗಲು ಇಲ್ಲಿನ ಅನುಭವಕ್ಕೆ ಮತ್ತು ಸಂವಿಧಾನಾತ್ಮಕ ನೀತಿಗಳಿಗೂ ಸರಿ ಹೊಂದುತ್ತಿಲ್ಲವೆಂದು ತಿಳಿಯಬೇಕಾಗುತ್ತದೆ. ಏಕೆಂದರೆ ಪ್ರತಿಯೊಬ್ಬ ಪ್ರಜೆಗೂ ಸಂವಿಧಾನದ ಆಶಯ ಮತ್ತು ಅದರ ಬಗೆಗೆ ಒಲವು ಎರಡು ಇರಬೇಕು ಆದರೆ ಭಾರತದಲ್ಲಿ ಪಿಹೆಚ್.ಡಿ ಮಾಡಿದಂತಹ ವ್ಯಕ್ತಿಗೆ ಸಂವಿಧಾನದ ಅನುಸೂಚಿ 10 ಏನು ಹೇಳುತ್ತದೆ ಎಂದರೆ ಓದಿಕೊಂಡು ಬಂದು ಹೇಳುತ್ತಾನೆ. ಅದರ ಬಗೆಗೆ ಒಲವಿದ್ದರೆ ಜೀವನೋಪಾಯಕ್ಕಾಗಿ ಮಾರ್ಗವಾಗಿಸಿಕೊಳ್ಳುತ್ತಾನೆ. ಅದೇ ಪಾಶ್ಚಿಮಾತ್ಯ ಜಗತ್ತಿನ ಪ್ರಾಥಮಿಕ ಶಾಲೆಯಲ್ಲಿನ ವಿದ್ಯಾರ್ಥಿಗೂ ಸಹ ತಮ್ಮ ಸಂವಿಧಾನದ ಆಶಯಗಳನ್ನು ಸುಲಲಿತವಾಗಿ ಹೇಳುವಂತ ಆಸೆ, ಅಭಿಮಾನ, ಒಲವು ಎಲ್ಲವೂ ರಕ್ತಗತವಾಗಿ ಬರುತ್ತದೆ. ಹಾಗಾಗಿ ಭಾರತದ ಸಂವಿಧಾನದ ಮಹತ್ವ ಎತ್ತಿ ಹಿಡಿಯುವ ವ್ಯಕ್ತಿಯ ತೀರ್ಪು ಹೇಗಿರುತ್ತದೆಯೊ ಹಾಗೆ ಜನಗಳು ವಾಲುತ್ತಾರೆ ಉದಾಹರಣೆಗೆ ಒಬ್ಬ ಸಭಾಧ್ಯಕ್ಷ ಶಾಸಕರಿಗೆ ಅನರ್ಹತೆಯ ತೀರ್ಪು ಪ್ರಕಟಿಸಿ ಸಂವಿಧಾನ ಬದ್ಧವಾಗಿಯೇ ನಡೆದುಕೊಂಡರು ಎಡಪಂಥಿಯ ಮತ್ತು ಬಲಪಂಥಿಯ ಜನರು ತಮ್ಮದೆ ರೀತಿಯಲ್ಲಿ ವ್ಯಾಖ್ಯಾನಿಸಿ ಎಳೆದಾಡುತ್ತಾರೆಯೇ ವಿನಃ ಸಂವಿಧಾನವನ್ನು ಮತ್ತು ಅದಕ್ಕೆ ಸಂಬಂಧಿಸಿದ ಕಾನೂನುಗಳನ್ನು ಗಮನಿಸುವುದೆ ಇಲ್ಲಾ. ಇದೆ ತೆರನಾಗಿ ಸಾಮಾಜಿಕ ಜಾಲತಾಣಗಳಲ್ಲಿ ಬಹುತೇಕ ಜನರು ಪ್ರಜಾಕೀಯವನ್ನು ಎಡಪಂಥಿಯ ಬಲಪಂಥಿಯ ನಿಲುವುಗಳಲ್ಲೆ ನೋಡುತ್ತಾರೆ

ಹೇಗೇಂದರೆ ಅಭಿವೃದ್ಧಿಯ ವಿಚಾರ ಹೇಳಿದರೆ ಇದು ಬಲಪಂಥಿಯ ಪಕ್ಷ ಬಡವರ ವೈಯಕ್ತಿಕ ಕಾಳಜಿಯ ಬಗ್ಗೆ ಮಾತನಾಡುವುದಿಲ್ಲ ಎನ್ನುತ್ತಾರೆ. ಹಾಗೆಯೇ ಸಂವಿಧಾನ ಉತ್ತಮವಾಗಿದೆ ಎಂದರೆ ಉಪೇಂದ್ರರವರು ಎಡಪಂಥಿಯ ಧೋರಣೆ ಎನ್ನುತ್ತಾರೆ ದುರಂತವೇಂದರೆ ನಮ್ಮ ಜನಕ್ಕೆ ಇದರ ಹೊರೆತಾಗಿ ಮಾತನಾಡಲು ಬರುವುದೆ ಇಲ್ಲವೆಂಬತಾಗಿದೆ. ಎರಡನೆಯ ಅಂಶವನ್ನು ಗಮನಿಸಿದರೆ ಇಡಿ ವಿಶ್ವಕ್ಕೆ ಮಾದರಿಯಾಗುವ ಸಂವಿಧಾನ ಭಾರತದಲ್ಲಿದ್ದು ಅಭಿವೃದ್ದಿಗೆಗಾಗಿಯೆ ಹೇಳಿ ಮಾಡಿಸಿದಂತಾಗಿದೆ ಎಂದರೆ ತಪ್ಪಾಗಲಾರದು. ಸಂವಿಧಾನಾತ್ಮಕ ನೀತಿಗಳ ಅನುಷ್ಠಾನತೆಯಲ್ಲಿ ಅತೀ ಎಚ್ಚರದಿಂದ ಇರಬೇಕಾದುದು ಅನಿವಾರ್ಯವಾಗಿದೆ.

**6) ಬಹುತೇಕ ಜನಕ್ಕೆ ಕ್ಷಿಪ್ರ ಅಭಿವೃದ್ಧಿ ಇಷ್ಟವಿಲ್ಲದಿರುವುದು**

ಭಾರತದಲ್ಲಿ ಸಾಕ್ಷರತೆ ಶೇಕಡ 75ರಷ್ಟಿದೆ, ಹಾಗೆಯೇ ಕರ್ನಾಟಕದಲ್ಲೂ ಸಹ ಶೇಕಡ 76ರಷ್ಟಿದೆ ಉಪೇಂದ್ರರವರು ಹೇಳುವ ಎಲ್ಲಾ ಸತ್ಯಗಳು ಕಣ್ಣೆದುರೆ ಇವೆ ಅವೆಲ್ಲವನ್ನು ಸಹ ವಿದ್ಯಾವಂತ ವರ್ಗ ಗಮನಿಸುತ್ತಲೇ ಇದೆ. ಆದರೆ ಪೂರಕವಾಗಿ ಬೆಂಬಲಿಸಲು ಮುಂದಾಗುವುದಿಲ್ಲ ಏಕೆಂದರೆ ಬಹುತೇಕರು ಕ್ಷಿಪ್ರ ಕ್ರಾಂತಿಯ ಅಭಿವೃದ್ಧಿ ಇಷ್ಟವಿಲ್ಲದಿರುವುದು ಮೊದಲೆ ಹೇಳಿದ ಹಾಗೆ ರಾಷ್ಟ್ರ ರಾಜ್ಯ ಪರಿಕಲ್ಪನೆ ಇಲ್ಲದಿರುವುದರಿಂದ ಕೆಲವು ವರ್ಗಕ್ಕೆ ಅಂದರೆ (01) ರಾಜಕೀಯ ವ್ಯಕ್ತಿಗಳಿಗೆ (02) ಮೇಲ್ವರ್ಗದ ವ್ಯಕ್ತಿಗಳಿಗೆ (03) ಸ್ವಜನ ಪಕ್ಷಪಾತ ಮನೋಭಾವದವರು ಎಲ್ಲಾರು ಅಭಿವೃದ್ಧಿ ಹೊಂದುವುದನ್ನು ಇಷ್ಟಪಡುವುದಿಲ್ಲ. ರಾಜಕೀಯ ವ್ಯಕ್ತಿಗಳು ತಮ್ಮದೆ ಖಾಸಗಿ ಶಾಲೆ, ಕಾಲೇಜು, ಆಸ್ಪತ್ರೆ, ಪೆಟ್ರೋಲ್ ಬಂಕ್, ಕ್ರಷರ್, ಹಾಗೆಯೇ ಖಾಸಗಿ ಕಂಪನಿಗಳು ತೆರೆದಿರುವುದರಿಂದ ಸರ್ಕಾರಿ ಸಂಸ್ಥೆಗಳನ್ನು ಬೆಳೆಸುವ ಗೋಜಿಗೆ ಹೋಗುವುದಿಲ್ಲ ಇದರಿಂದ ತಮಗೆ ನಷ್ಟವೆಂದು ಅವರಿಗೆ ಅರಿವಿದೆ. ಎರಡನೆಯದಾಗಿ ಭಾರತ ಜಾತಿಗಳ ನಾಡಾಗಿರುವುದರಿಂದ ಕೆಲವು ವರ್ಗಗಳು ಎಲ್ಲಾ ರೀತಿಯಿಂದಲೂ ಸಬಲರಾಗಿರುವುದರಿಂದ ಅವರಿಗೆ ತತ್ ಕ್ಷಣದ ಅಭಿವೃದ್ಧಿಯಾದರೆ ಕೆಳವರ್ಗಗಳು ಪೈಪೋಟಿಗೆ ಸಮನಾಗುತ್ತಾರೆ ಎಂಬ ಮನೋಭಾವನೆಯಿಂದ ಪ್ರಜಾಕೀಯಕ್ಕೆ ಬೆಂಬಲ ಸೂಚಿಸುವುದಿಲ್ಲ. ಇನ್ನು ಸ್ವಜನ ಪಕ್ಷಪಾತಿಗಳು ಕೇವಲ ತಮ್ಮ ಜಾತಿ ನೇರಕ್ಕೆ ನೋಡುವುದರಿಂದ ಸಮಗ್ರ ರಾಜ್ಯದ ಕ್ಷಿಪ್ರಗತಿಯ ಕ್ರಾಂತಿಗೆ ಅಥವಾ ಅಭಿವೃದ್ಧಿಗೆ ಬೆಂಬಲಿಸುವುದಿಲ್ಲ.

**7) ಅಭಿವೃದ್ಧಿಯ ದೃಷ್ಟಿಕೋನ ಸಮುದಾಯವೇ ಅಥವಾ ವ್ಯಕ್ತಿಗತವಾಗಿದೆಯೇ ಎಂಬುದನ್ನು ತಿಳಿಯದಿರುವುದು**

ಪ್ರಜಾಕೀಯ ಅಭಿವೃದ್ಧಿಯ ಮಂತ್ರ ಜಪಿಸಬೇಕಾದರೆ ಮೊದಲು ಇಲ್ಲಿನ ಸಮಾಜವನ್ನು ಅರ್ಥೈಸಿಕೊಳ್ಳುವುದು ಅತಿಮುಖ್ಯವಾಗುತ್ತದೆ. ಏಕೆಂದರೆ ಭಾರತೀಯ ಸಮಾಜ ಇಡೀ ವಿಶ್ವದಲ್ಲಿಯೇ ಭಿನ್ನವಾದ ಮತ್ತು ವಿಭಿನ್ನತೆಯನ್ನು ಹೊಂದಿರುವ ರಾಷ್ಟ್ರವಾಗಿರುವುದರಿಂದ ಭಾರತೀಯ ಸಮಾಜವು ಪಾಶ್ಚಿಮಾತ್ಯ ಜಗತ್ತಿನ ತೆರನಾಗಿ ವ್ಯಕ್ತಿಗತವಾಗಿಲ್ಲವಾಗಿದೆ. ಅಲ್ಲಿನ ವ್ಯವಸ್ಥೆಯಲ್ಲಿ ಪ್ರತಿಯೊಬ್ಬರು ರಾಷ್ಟ್ರದ ಬಗ್ಗೆ ಅಭಿಮಾನವಿರುವುದರಿಂದ ಅದಕ್ಕೆ ಪೂರಕವಾಗಿ ವ್ಯವಸ್ಥೆ ರಚಿತವಾಗಿದೆ. ಆದರೆ ಭಾರತದಲ್ಲಿ ವೈಯಕ್ತಿಕವಾಗಿ ಯಾವುದೇ ಲಾಭವಿಲ್ಲವೆಂದರೆ ಅಥವಾ ಲಾಭ ಬರುವುದಿಲ್ಲವೆಂದರೆ ಬ್ರಹ್ಮನೆ ಬಂದು ಕರೆದರು ಬಹುತೇಕ ಭಾರತೀಯರು ಸೊಪ್ಪು ಹಾಕುವುದಿಲ್ಲ. ಹಾಗಾಗಿ ಪ್ರತಿಯೊಬ್ಬ ವ್ಯಕ್ತಿಗೂ ಸಹ ಲಾಭವಾಗುತ್ತದೆ ಅದು ಅವರ ಕೈಗೆ ಶಿಕ್ಷಣ ಆರೋಗ್ಯ ಎಲ್ಲವೂ ಸಿಗುತ್ತದೆ ಎಂದರೂ ಖಾಸಗಿ ಒಡೆತನದ ಮುಂದೆ ಅವನೆಲ್ಲಾ ನಂಬುವ ಗೋಜಿಗೆ ಭಾರತೀಯರ ಮನಸ್ಸುಗಳು ಪಕ್ವವಾಗಿಲ್ಲದಿರುವುದು ದುರಂತವೆ ಸರಿಯೆನ್ನಬಹುದು. ಭಾರತದಲ್ಲಿ ಒಂದು ಯೋಜನೆ ಸಂಪೂರ್ಣವಾಗಿ ಯಶಸ್ವಿಯಾಗಬೇಕಾದರೆ ಭ್ರಷ್ಟಾಚಾರ ನಿಲ್ಲಬೇಕು ಆ ಭ್ರಷ್ಟಾಚಾರ ನಿಲ್ಲಬೇಕಾದರೆ ಎಲ್ಲರೂ ಭ್ರಷ್ಟರೆ ಆಗಿರುವುದರಿಂದ ನಿಲ್ಲಿಸಲು ಸಾಧ್ಯವಿಲ್ಲ. ಇದಕ್ಕೆ ಒಂದೆ ಸೂಕ್ತಮಾರ್ಗವೆಂದರೆ ಭ್ರಷ್ಟಾಚಾರವಾಗಿರುವುದನ್ನು ತಿಳಿಸಿದ ವ್ಯಕ್ತಿಗೆ ಸೂಕ್ತ ಬಹುಮಾನ ಸನ್ಮಾನ ಮಾಡುತ್ತೇವೆ ಎಂದಾಗ ಒಬ್ಬರ ಬೆನ್ನಿಗೆ ಒಬ್ಬರಂತೆ ಸಿಸಿಟಿವಿ ಗಿಂತ ಹೆಚ್ಚು ಕಾರ್ಯಾಚರಣೆ ಮಾಡುತ್ತಾರೆ. ಆದ್ದರಿಂದ ಭಾರತ ಸಮುದಾಯವಾದದ ಮೂಲಾಂಶವನ್ನು ಹೊಂದಿರುವ ರಾಷ್ಟ್ರವಾಗಿರುವುದರಿಂದ ಇಲ್ಲಿ ಅಭಿವೃದ್ಧಿಯನ್ನು ಪಡಿಸುವಾಗ ತುಂಬಾನೆ ಅಡೆ–ತಡೆಗಳು ಪರೋಕ್ಷವಾಗಿ ಬರುತ್ತವೆ ಇದು ಸಹ ಉತ್ತಮ ಪ್ರಜಾಕೀಯ ಪಕ್ಷಕ್ಕೆ ದೊಡ್ಡ ಕಟಂಕವೆನ್ನಬಹುದು.

**ಉಪಸಂಹಾರ**

ಕೊನೆಯದಾಗಿ ಕರ್ನಾಟಕದಲ್ಲಿ ಉದಯವಾಗಿರುವ ಪ್ರಜಾಕೀಯವು ಪ್ರಜೆಗಳ ಮೂಲಭೂತ ಅವಶ್ಯಕತೆಗಳಿಂದ ಹಿಡಿದು ಉನ್ನತ ಜೀವನ ಶೈಲಿಯನ್ನು ರೂಪಿಸಿಕೊಳ್ಳುವವರೆಗೂ ಜನತೆಯ ತೆರಿಗೆ ಹಣವನ್ನು ಪಾರದರ್ಶಕವಾಗಿ ಬಳಸಬೇಕು ಎಂಬುದು. ವಾಸ್ತವವಾಗಿ ವಿಶ್ವದ ಬಹುತೇಕ ಅಭಿವೃದ್ಧಿ ಹೊಂದಿದ ರಾಷ್ಟ್ರಗಳು ಇದೇ ನೆಲೆಯಲ್ಲಿ ಕಾರ್ಯಗತಗೊಂಡಿವೆ, ವಿಪರ್ಯಾಸ ಹಾಗೂ ದುರಂತವೆಂದರೆ ನಿಜವಾದ ರಾಜಕೀಯದ ಉತ್ತಮ ಗ್ರಂಥವೆಂದು ಭಾರತದಲ್ಲಿ ಸಂವಿಧಾನವಿದ್ದರೆ ಉಳಿದೆಲ್ಲಾ ರಾಜಕೀಯ ಪ್ರಕ್ರಿಯೆಗಳು ನಕಲಿ ರಾಜಕೀಯವನ್ನೆ ಸೃಷ್ಠಿಸಿವೆ ಹಾಗೆ ಅದೇ ನಿಜವೆಂದು ಜನಗಳನ್ನು ನಂಬಿಸಲಾಗಿದೆ.ಇದರಿಂದ ಭ್ರಷ್ಟಾಚಾರ, ಕುತಂತ್ರ, ಜಾತಿರಾಜಕಾರಣ, ಧರ್ಮರಾಜಕಾರಣ ಜನಗಳಿಗೆ ನೇರವಾಗಿ ತೋರ್ಪಡಿಸದೆ ಪಕ್ಷದ ಅಜೆಂಡಗಳಾಗಿಸಿ ಸಂವಿಧಾನ ಬದ್ದವಾಗಿವೆ ಎಂದೇ ಮರೆಮಾಚಲಾಗುತ್ತದೆ.ಭಾರತದಲ್ಲಿನ ಶಿಕ್ಷಣ ವ್ಯವಸ್ಥೆಯಿಂದಲೆ ಎಡಪಂಥಿಯ ಮತ್ತು ಬಲಪಂಥಿಯ ಧೋರಣೆಗಳು ಬೆಳವಣಿಗೆ ಹೊಂದುವುದರಿಂದ ಅಭಿವೃದ್ದಿಯ ಪಂಥವನ್ನು ರಚನೆ ಮಾಡಿಕೊಳ್ಳುವ ಯೋಚನಾ ಶಕ್ತಿಯೇ ಇಲ್ಲಾವಾಗಿದೆ.ಒಮ್ಮೊಮ್ಮೆ ಬಂದರು ದೈತ್ಯ ನಕಲಿ ರಾಜಕೀಯದ ಎದುರು ಸೊಲುವಂತಾಗಿದೆ.ಇದನ್ನೆ ದುರ್ಬಳಕೆ ಮಾಡಿಕೊಳ್ಳುವ ಕೆಲವರು ವಂಚನೆ, ಇನ್ನಿತರ ಮಾರ್ಗಗಳ ಮೂಲಕ ಹಣ ಮಾಡಿಕೊಂಡು ಚುನಾವಣೆಯಲ್ಲಿ ಭಾಗವಹಿಸಿ ಜನಪ್ರತಿನಿಧಿಗಳಾಗಿತ್ತಾರೆ.ಭಾರತದಲ್ಲಿನ ಜನರಲ್ಲಿ ಅರಿವಿನ ಶಿಕ್ಷಣವಿಲ್ಲದೆ ಒಳ್ಳೆಯದಕ್ಕಾಗಿ ಜೀವನವನ್ನೆ ಮುಡಿಪಾಗಿಸುವ ಸಲುವಾಗಿ ಯಾರೊಬ್ಬರು ಮುಂದೆ ಬರಲು ತಯಾರಿಲ್ಲದೆ ತಮ್ಮ ತಮ್ಮ ಸುರಕ್ಷತೆ ಮುಖ್ಯವೆಂದೆ ಯೋಗ್ಯರು ರಾಜಕೀಯದಲ್ಲಿ ಭಾಗವಹಿಸದೆ ಇದ್ದರೆ ಸಾವಿರಾರು ವರ್ಷ ಕಳೆದರೂ ಪ್ರಜಾಕೀಯ ಯಶಸ್ವಿಯಾಗಲು ಸಾಧ್ಯವಿಲ್ಲವೆನ್ನಬಹುದು. ಹಾಗಾಗಿ ಪ್ರಜಾಕೀಯದ ಯಶಸ್ಸಿಗೆ (ಅಮೆರಿಕಾ ಚುನಾವಣಾ ಪದ್ದತಿ)ರಾಜಕೀಯದ ಮಾರ್ಗದಲ್ಲೆ ಸಾಗಬೇಕು ಇಡೀ ಪ್ರಪಂಚದ ಶುದ್ದ ರಾಜಕಾರಣದ ಸ್ವರೂಪವೇ ಅದು ಭಾರತದಲ್ಲಿರುವ ನಕಲಿ ರಾಜಕೀಯವನ್ನು ದೂರವಾಗಿಸಲು ಪ್ರಜಾಕೀಯದ ಅವಶ್ಯಕತೆ ತುಂಬಾ ಇದೆ ಇಲ್ಲಾವಾದರೆ ಭಾರತ ಸಾವಿರ ವರ್ಷ ಕಳೆದರೂ ಅಭಿವೃದ್ಧಿ ಶೀಲ ರಾಷ್ಟ್ರವಾಗಿಯೇ ಇರುತ್ತದೆ....!

## ಮಾಹಿತಿ ಆಧಾರ

1. https://www.researchgate.net/publication/313000329_Nation_and_State/citation/download
2. http://www.pass.va/content/scienzesociali/en/events/2019-23/nations.pdf
3. https://www.americamagazine.org/politics-society/2000/02/19/religion-and-politics-india
4. https://www.grin.com/document/372219
5. https://www.researchgate.net/publication/328064702_Public_Awareness_Knowledge_and_Understanding_of_GST_in_India
6. https://www.molitics.in/article/154/interesting-facts-on-indian-politics
7. https://blogs.lse.ac.uk/southasia/2019/03/28/book-review-the-constitution-of-india-a-contextual-analysis/